ಗಮನವನ್ನು ಸೆಳೆದಂತಹ ಮೊದಲ ಕನ್ನಡ ಸಾಹಿತಿಯಾದ, ಮೋದಿ ಅಧಿಕಾರಕ್ಕೆ ಬಂದರೆ ದೇಶ ತೊರೆಯುವುದಾಗಿ ಹೇಳಿ ವಿವಾದಕ್ಕೊಳಗಾಗಿದ್ದಂತಹ ಅನಂತಮೂರ್ತಿಯವರು ತಮ್ಮ ಕೊನೆಗಾಲದಲ್ಲಿ ಪೇಜಾವರ ಶ್ರೀಗಳ ದಿವ್ಯ ಪಾದಕಮಲಗಳಿಗೆರಗಿದ ಅರಗಿಸಿಕೊಳ್ಳಲಾಗದ ವಿರೋಧಾಭಾಸವನ್ನು ನಾವು ಕಂಡಿದ್ದೇವೆ. ಹಾಗೆಯೇ, 'ದಲಿತ ಕವಿ' ಎಂದೇ ಹೆಸರಾಗಿದ್ದ ಸಿದ್ಧಲಿಂಗಯ್ಯನವರು ತಮ್ಮ ಕೊನೆಯ ವರ್ಷಗಳಲ್ಲಿ ಬಿಜೆಪಿ ಸಖ್ಯ ಹೊಂದಿದ್ದನ್ನು ಕೂಡ.

ಬೂಸಾ ಘಟನೆಯಾದ ಕೆಲ ತಿಂಗಳುಗಳ ನಂತರ, 1974ರ ಏಪ್ರಿಲ್ 20ರಂದು ಮೈಸೂರಿನಲ್ಲಿ ನಡೆದ 'ಬರಹಗಾರರ ಮತ್ತು ಕಲಾವಿದರ ಒಕ್ಕೂಟ'ದ ಉದ್ಘಾಟನಾ ಭಾಷಣದಲ್ಲಿ, ಕುವೆಂಪು ಅವರು ಕೂಡ ಆ ಘಟನೆಗೆ ಹೀಗೆ ಪ್ರತಿಕ್ರಿಯಿಸಿದ್ದರು: "ಬಸವಲಿಂಗಪ್ಪನವರು ಆವೊತ್ತೇನೋ ಎಲ್ಲಾ ಬೂಸಾ ಅಂತ ಹೇಳಿಬಿಟ್ಟರು ಅಂತ ಗಲಾಟೆಯೋ ಗಲಾಟೆ ಮಾಡಿ, ಮಂತ್ರಿಮಂಡಲ ಉರುಳಿ, ದೊಡ್ಡ ರಾಜಕೀಯ ವಿಪ್ಲವವೇ ಆಗಿಹೋಯಿತು. ಆದರೆ ನೋಡಿ, ಈ ಬೂಸಾ ಸಾಹಿತ್ಯ ಅಂತ ಯಾವುದನ್ನು ಕರೆಯುತ್ತೇವೆಯೋ, ಅದು ಪ್ರಪಂಚದ ಎಲ್ಲಾ ಸಾಹಿತ್ಯದಲ್ಲಿಯೂ ಇರುತ್ತದೆ. ಸುಮಾರು ಮುಕ್ಕಾಲು ಪಾಲಿನ ಮೇಲೆ ಇರುವುದು ಬೂಸಾ ಸಾಹಿತ್ಯವೇ. ಯಾವುದನ್ನು ನೀವು ಫಸ್ಟ್ ರೇಟ್, ಗ್ರೇಟ್, ಅಂತ ಹೇಳುತ್ತೀರೋ, ಅದೆಲ್ಲ ಒಂದು ಕಾಲು ವಾಸಿ ಇದ್ದರೆ ಅದೇ ನಮ್ಮ ಪುಣ್ಯ... ಎಲ್ಲ ದೇಶದ ಸಾಹಿತ್ಯದಲ್ಲಿಯೂ ಮುಕ್ಕಾಲು ಪಾಲು ಇರುವುದು ಬೂಸಾನೇ... ಆ ಅರ್ಥದಲ್ಲಿ ನಮ್ಮ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿಯೂ ಸಹ ನಾವು ಮೂರು ನಾಲ್ಕು ಜನರನ್ನು ಮಹಾಕವಿಗಳು, ದೊಡ್ಡವರು ಅಂತ ಗುರುತಿಸುತ್ತೇವೆ. ಇನ್ನೂ ಏಳೆಂಟು ಜನ ಕವಿಗಳನ್ನು ಸಮರ್ಥರಾದ ಕವಿಗಳು ಅಂತ ಹೇಳುತ್ತೇವೆ." ಹಾಗಿದ್ದಲ್ಲಿ, ವರ್ಷಕ್ಕೆ ಬೃಹತ್ ಪ್ರಮಾಣದಲ್ಲಿ ಸಾಹಿತ್ಯ ಉತ್ಪಾದನೆಯಾಗುವಾಗ ಫಸ್ಟ್ ರೇಟ್, ಗ್ರೇಟ್ ಅನ್ನುವಂತಹವು ಹುಟ್ಟಿಕೊಳ್ಳುವುದಾದರೂ ಹೇಗೆ? ಲೇಖಕರಿಂದಾಗಿಯೋ, ಪ್ರಕಾಶಕರಿಂದಾಗಿಯೋ, ಓದುಗರಿಂದಾಗಿಯೋ ಅಥವಾ ವಿಮರ್ಶಕರಿಂದಾಗಿಯೋ?

**ಆಲ್ ಲಿಟರೇಚರ್ ಈಸ್ ವಲ್ಗರ್**

ಆಧುನಿಕ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಕಂಡುಬರುವುದೇನೆಂದರೆ, ಬಹುತೇಕ ಸಾಹಿತ್ಯ ಓದಲೆಂದೇ ಸೃಷ್ಟಿಯಾದದ್ದು. ವಿಚಿತ್ರವೆಂದರೆ ಹೆಚ್ಚಿನ ನಾಟಕಗಳು ಕೂಡ ಇದಕ್ಕೆ ಹೊರತಾಗಿಲ್ಲ. ಆದರೆ, ಸಾಹಿತ್ಯವೆಂದರೆ ನಾಲ್ಕು ಗೋಡೆಗಳ ನಡುವೆ ಕೂತು ಉಲ್ಲಾಸಕ್ಕೆ ಓದುವಂತದ್ದಲ್ಲ, ಅವು 'ಆಡು ಪಠ್ಯಗಳು' ಎಂದು ತೋರಿಸಿಕೊಟ್ಟದ್ದೇ ದಲಿತ ಸಾಹಿತ್ಯ. ಅದಕ್ಕೂ ಮುಂಚೆ ಜನಪದ ಸಾಹಿತ್ಯವಿತ್ತಲ್ಲ ಎಂದು ಹೇಳಬಹುದು. ಜನಪದ ಸಾಹಿತ್ಯ ವಿಶಾಲಾರ್ಥದಲ್ಲಿ ದಲಿತ ಸಾಹಿತ್ಯವೇ ಅಲ್ಲವೇ ಎಂದು ವಾದಿಸಬಹುದಾದರೂ, ಅದಕ್ಕಿಂತ ಮುಖ್ಯವಾಗಿ ದಲಿತ ಸಾಹಿತ್ಯ ಆಧುನಿಕ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡೇ ಇದನ್ನು ಮಾಡಿ ತೋರಿಸಿದ್ದು ವಿಶೇಷ. ಪಠ್ಯಗಳನ್ನು ಗೋಡೆಗಳಿಂದಾಚೆಗೆ ತಂದು ಬಯಲಿಗಿರಿಸಿದ್ದು, ಆ ಮೂಲಕ ಒಂದು ಹೊಸ ಕಲಾಮೀಮಾಂಸೆಯನ್ನೇ ಕಟ್ಟಿದ್ದು ಅದರ ಅಗ್ಗಳಿಕೆ. ಉದಾಹರಣೆಗೆ, ಸಿದ್ದಲಿಂಗಯ್ಯನವರ 'ಹೋರಾಟದ ಹಾಡುಗಳು', ಮಹಾದೇವರ 'ಕುಸುಮಬಾಲೆ'ಯ ಹಾಡು ರೂಪ, ನಾಟಕಾವತರಣಿಕೆ, ಇತ್ಯಾದಿ. ಸಿದ್ದಲಿಂಗಯ್ಯ, ಕೆ.ಬಿ. ಸಿದ್ದಯ್ಯ, ಗೋವಿಂದಯ್ಯ, ಕೆ. ರಾಮಯ್ಯ, ಇಂದೂಧರ ಹೊನ್ನಾಪುರರಂತಹ ಅನೇಕರ ಹೋರಾಟದ ಹಾಡುಗಳು ಅಂದಿನ ಅಸ್ಪೃಶ್ಯ ಸಮುದಾಯಗಳ ಮೇಲೆ ನಡೆದ ದೌರ್ಜನ್ಯ, ದಬ್ಬಾಳಿಕೆ, ಶೋಷಣೆ, ಅತ್ಯಾಚಾರ, ಕೊಲೆ ಮುಂತಾದವನ್ನೇ ಆಧರಿಸಿ ಬರೆದಿರುವಂತಹವಾದರೂ, ಕಾಲಾತೀತವಾಗಿ ಇಂದಿಗೂ ಯಾವ ತಳಸಮುದಾಯಗಳ ಪ್ರತಿಭಟನೆಗಳೇ ನಡೆದರೂ ಅವುಗಳ ದನಿಯಾಗಿ ಮೊಳಗುತ್ತವೆ. ಹೋರಾಟದ ಹಾಡುಗಳ ಈ ಸಾರ್ವಕಾಲಿಕ ಜನಪ್ರಿಯತೆಗೆ ಹೋರಾಟದ ಹಾಡುಗಳಿಗೆ ಸಂಗೀತ ಸಂಯೋಜಿಸಿ ಹಾಡಿದವರು, ನಾಟಕವಲ್ಲದ ಸಾಹಿತ್ಯಕ ಪಠ್ಯಗಳನ್ನು ನಾಟಕವಾಗಿಸಿ ಆಡಿಸಿದ ರಂಗಕರ್ಮಿಗಳು ಕಾರಣ ಎಂಬುದನ್ನಿಲ್ಲಿ ಮರೆಯಬಾರದು. ಹೀಗೆ, ಸಾಹಿತ್ಯ, ಸಂಗೀತ, ನಾಟಕ, ಎಲ್ಲವೂ ಏಕವಾಗಿ ಮೇಳೈಸಿದ ಸಂದರ್ಭಗಳು ಕನ್ನಡದಲ್ಲಿ ಹಿಂದೆಂದೂ ಇರಲಿಲ್ಲ. ಆ ಮೂಲಕ ದಲಿತ ಸಾಹಿತ್ಯ ತೋರಿಸಿಕೊಟ್ಟದ್ದೇನೆಂದರೆ, ಅಂಬೇಡ್ಕರ್ ತಮ್ಮ 'ಹೂ ವರ್ ದ ಶೂದ್ರಾಸ್'(1946)ನಲ್ಲಿ